# ತಲೆಕೂದಲನ್ನು ಹೇಗೆ ಕತ್ತರಿಸಿದರೆ, ಕಟ್ಟಿಸಿಕೊಂಡರೆ ಚೆಂದ?





ಹದಿಹರೆಯದವರಿಗೆ ಇದೊಂದು ಮಿಲಿಯನ್ ಡಾಲರ್ ಪ್ರಶ್ನೆ. ಅದಕ್ಕೆಂದೇ ಸತತವಾಗಿ ಫ್ಯಾಶನ್ ಜಗತ್ತಿನಲ್ಲಿ ತಲೆಕೂದಲಿನ ವಿಭಿನ್ನ ವಿನ್ಯಾಸಗಳು ಬರುತ್ತಲೇ ಇವೆ. ತಲೆಕೂದಲಿನ ಹೊಸ ವಿನ್ಯಾಸಕ್ಕಾಗಿ ಸಾವಿರಾರು ರೂಪಾಯಿ ಅಥವಾ ಡಾಲರ್ ಖರ್ಚು ಮಾಡುವವರೂ ಇದ್ದಾರೆ. ತಲೆ ಬೋಳಿಸಿಕೊಂಡರೂ ಅದೊಂದು ಫ್ಯಾಶನ್. ಫ್ಯಾಶನ್ ಜಗತ್ತಿನಲ್ಲಿ ಕೇಶವಿನ್ಯಾಸಕರಿಗೆ ಭಾರೀ ಡಿಮ್ಯಾಂಡು. ವಸ್ತ್ರವಿನ್ಯಾಸಕ್ಕಿಂತಲೂ ಕೇಶವಿನ್ಯಾಸದಲ್ಲಿ ಹೊಸತನ ಸಾಧಿಸುವುದು ಸವಾಲಿನ ಕೆಲಸ ಎನ್ನುವುದು ಬಲ್ಲವರ ಮಾತು. ಸಿನಿಮಾ ನಟ– ನಟಿಯರೂ ತಮ್ಮ ತಲೆಕೂದಲಿನ ಮೇಲೆ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಾರೆ. ಹಿಂದಿಯಲ್ಲಿ ಅಮೀರ್‌ಖಾನ್ ನಂತಹ ಪ್ರತಿಭಾನ್ವಿತ ನಟ ಕೂಡಾ 'ಗಜನಿ' ಚಿತ್ರದಲ್ಲಿ ವಿಚಿತ್ರ ಕೇಶವಿನ್ಯಾಸ ಮಾಡಿಸಿದ್ದು ನಿಮಗೆ ನೆನಪಿರಬಹುದು. ಕನ್ನಡದಲ್ಲಿ ಇಂತಹ ವಿಚಿತ್ರ ವಿನ್ಯಾಸಗಳಲ್ಲಿ ಉಪೇಂದ್ರ ಎತ್ತಿದ ಕೈ.

ಕೇಶ ವಿನ್ಯಾಸದಲ್ಲಿ ಇತ್ತೀಚೆಗೆ ಚಿತ್ರ ವಿಚಿತ್ರವಾಗಿ ಕಾಣಿಸುವುದೇ ಅತ್ಯಂತ ದೊಡ್ಡ ಸಾಧನೆ ಎನ್ನಲಾಗುತ್ತಿದೆ. ಅದಕ್ಕಾಗಿ ಯುವಜನರು ಹೊಸ ತಂತ್ರಜ್ಞಾನವನ್ನೂ ಬಳಸುತ್ತಿದ್ದಾರೆ. ಇಲ್ಲಿದೆ ಇತ್ತೀಚಿನ ಕೆಲವು 'ವಂಡರ್' ಮಾದರಿಗಳು.

■ ಡಾ.ಅಮೀರುದ್ದೀನ್ ಖಾಜಿ